1759

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನವೀಕರಿಸಬಹುದಾದ ಮತ್ತು ಅಸಂಪ್ರದಾಯಿಕ ಇಂಧನ ಯೋಜನೆಗಳ ಪ್ರಸ್ತಾವನೆಗಳಲ್ಲಿ 'ನೆಟ್‌ವರ್ತ್' ಲೆಕ್ಕಹಾಕುವಾಗ ಅನುಸರಿಸಬೇಕಾದ ಮಾನದಂಡಗಳ ಕುರಿತು.

4444
6/6/11

* * * *

ಪ್ರಸ್ತಾವನೆ:-

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ರಾಜ್ಯದಲ್ಲಿ ಪವನ/ಕಿರುಜಲ/ಸೌರ ವಿದ್ಯುತ್/ಜೈವಿಕ ಇಂಧನ/ಸಹವಿದ್ಯುತ್ ಮುಂತಾದ ನವೀಕರಿಸಬಹುದಾದ ಮತ್ತು ಅಸಂಪ್ರದಾಯಿಕ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸಲು ಖಾಸಗಿ ಸಂಸ್ಥೆಗಳಿಗೆ ಅನುಮೋದನೆ ನೀಡುತ್ತಿದ್ದು, ಈ ರೀತಿಯ ಅನುಮೋದನೆ ನೀಡುವ ಮುನ್ನ, ಹಲವು ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ಅದರಲ್ಲಿ ಮುಖ್ಯವಾಗಿ, ಈ ಖಾಸಗಿ ಸಂಸ್ಥೆಗಳ 'ನೆಟ್‌ವರ್ತ್' (ನಿವ್ವಳ ಸದೃಢತೆ) (Net Worth) ಪರಿಗಣಿಸಲಾಗುತ್ತಿದೆ. ಆದರೆ, ಈ ನೆಟ್‌ವರ್ತ್‌ನ್ನು ಲೆಕ್ಕಹಾಕಲು ಮಾನದಂಡಗಳನ್ನು ನಿಗದಿಪಡಿಸದೇ ಇರುವುದರಿಂದ, ಈ ಕುರಿತು ಖಾಸಗಿ ಸಂಸ್ಥೆಗಳು ಸಲ್ಲಿಸುವ ನೆಟ್‌ವರ್ತ್ ಕುರಿತ ಮಾಹಿತಿಯು ಏಕರೂಪತೆಯಿಂದ (uniform) ಕೂಡಿರುವುದಿಲ್ಲದಿರುವುದರಿಂದ, ಇದನ್ನು ಪರಿಶೀಲಿಸಲು ಮತ್ತು ಲೆಕ್ಕಹಾಕಲು ತೊಡಕಾಗುತ್ತಿರುವುದನ್ನು ಗಮನಿಸಲಾಗುತ್ತಿದೆ. ಆದ್ದರಿಂದ, ನೆಟ್‌ವರ್ತ್ ಲೆಕ್ಕಹಾಕಲು ಒಂದು ಸೂಕ್ತ ಮಾನದಂಡವನ್ನು ಹಾಗೂ ನೆಟ್‌ವರ್ತ್‌ನ್ನು ಲೆಕ್ಕಹಾಕಿ, ಈ ಕುರಿತಂತೆ ಚಾರ್ಟೆಡ್ ಅಕೌಂಟೆಂಟ್‌ನಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ನೀಡುವ ಅವಶ್ಯಕತೆಯನ್ನು ಮನಗಂಡು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 240 ಎನ್‌ಸಿಇ 2011, ಬೆಂಗಳೂರು, ದಿನಾಂಕ:30-05-2011

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ನವೀಕರಿಸಬಹುದಾದ ಮತ್ತು ಅಸಂಪ್ರದಾಯಿಕ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಖಾಸಗಿ ಸಂಸ್ಥೆಗಳ ಅರ್ಜಿಗಳನ್ನು ಸಲ್ಲಿಸುವಾಗ ಆ ಸಂಸ್ಥೆಯ 'ನೆಟ್‌ವರ್ತ್'ನ್ನು ಈ ಕೆಳಗಿನಂತೆ ಲೆಕ್ಕಹಾಕುವುದು:-

**Net Worth:-**

**Paid up** - Equity Share Capital
**Add** - Equity Share Premium
**Add** - General Reserves
**Add** - Other Free Reserves (to be specified individually by the Chartered Accountant)
**Less** - Statutory Reserves
**Less** - Revaluation Reserves
**Less** - Accumulated Losses
**Less** - Intangible Assets included in the Balance Sheet
**Less** - Miscellaneous Expenditure to the extent **not written off**

ಮೇಲ್ಕಂಡ ಮಾನದಂಡವನ್ನು ಅಳವಡಿಸಿಕೊಂಡು ಸಂಸ್ಥೆಯ ನೆಟ್‌ವರ್ತ್‌ನ್ನು ಲೆಕ್ಕಹಾಕಿ ಹಾಗೂ ವಾರ್ಷಿಕ ನೆಟ್‌ವರ್ತ್‌ನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದ ನಮೂನೆಯಲ್ಲಿ ಚಾರ್ಟೆಡ್ ಅಕೌಂಟೆಂಟ್‌ರವರಿಂದ ಪ್ರಮಾಣೀಕೃತಗೊಳಿಸಿ ನೀಡತಕ್ಕದ್ದು. ಈ ಮಾನದಂಡವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ

ಅಂತರ್ಜಾಲದಲ್ಲಿ ಪ್ರಕಟಿಸಿ, ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರಲು ಕ್ರಮ ಜರುಗಿಸುವುದು. ಹಾಗೆಯೇ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವೂ ಸಹ ತನ್ನ ಎಲ್ಲಾ ಡಾಕ್ಯುಮೆಂಟ್, ಟೆಂಡರ್ ಬುಲೆಟಿನ್, ಮುಂತಾದವುಗಳಲ್ಲೂ ಈ ಮಾನದಂಡವನ್ನು ಅಳವಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುರೇಶ್.ಬಿ.ಕೃಷ್ಣಪ್ಪನವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
☎ 22034674.

ಇವರಿಗೆ:–

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

ಪ್ರತಿ:–

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ.39, "ಶಾಂತಿ ಗೃಹ", ಅರಮನೆ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು–560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
4. ಶಾಖಾ ರಕ್ಷ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

# CERTIFICATE

## COMPUTATION OF NETWORTH AS BELOW TO BE CERTIFIED BY A CHARTERED ACCOUNTANT

## NET WORTH

I hereby certify that the Net Worth of M/s ............. as on March 31, ............ is Rs............ crores, detailed as under:

(Figures in Rs Crores)

| PARTICULARS | FY ......... |
|---|---|
| **Paid up** Equity Share Capital | |
| **Add:** Equity Share Premium | |
| **Add:** General Reserves | |
| **Add:** Other Free Reserves (to be specified individually by the chartered accountant) | |
| **Sub Total** | |
| **Less :** Statutory Reserves | |
| **Less :** Revaluation Reserves | |
| **Less:** Accumulated Losses | |
| **Less:** Intangible Assets included in the Balance Sheet | |
| **Less:** Miscellaneous Expenditure to the extent **not written off** | |
| **Net Worth** | |

## DEFINITION

Net Worth shall mean as below:

**Net Worth** =

**Paid up** Equity Share Capital
**Add:** Equity Share Premium
**Add:** General Reserves
**Add:** Other Free Reserves (to be specified individually by the chartered accountant)
**Less :** Statutory Reserves
**Less :** Revaluation Reserves
**Less:** Accumulated Losses
**Less:** Intangible Assets included in the Balance Sheet
**Less:** Miscellaneous Expenditure to the extent **not written off**